**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು – 560 009.

ಸಂಖ್ಯೆ: ಸಂ. ಕಪಿಆರ್‌ಸಿ/ಸಿಎಸ್‌ಎಂ/63/2020 ದಿನಾಂಕ: 21.12.2020.

ಇವರಿಗೆ, **ಕೋವಿಡ್-19 ಆಧ್ಯತೆ**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೇ,

ವಿಷಯ: 2020-21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶಾಲೆಗಳನ್ನು ಪ್ರಾರಂಭಿಸುವ ಸಂಬಂಧ.
ಉಲ್ಲೇಖ: ದಿನಾಂಕ: 19.12.2020 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯ ತೀರ್ಮಾನ.

*******

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ 2020-21ನೇ ಸಾಲಿನಲ್ಲಿ ಇವರೆಗೂ ಶಾಲೆ/ಕಾಲೇಜು ಗಳನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ದಿನಾಂಕ: 19.12.2020 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಗಿದೆ.

1. ದಿನಾಂಕ: 01.01.2021 ರಿಂದ 10 ಮತ್ತು 12ನೇ ತರಗತಿಯ ಶಾಲೆ/ಕಾಲೇಜು ಗಳನ್ನು ಪ್ರಾರಂಭಿಸಲಾಗುವುದು.
2. ದಿನಾಂಕ: 01.01.2021 ರಿಂದ 6 ರಿಂದ 9ನೇ ತರಗತಿಯವರೆಗೆ ವಿದ್ಯಾಗಮ ಕಾರ್ಯಕ್ರಮವನ್ನು ಶಾಲೆಗಳಲ್ಲಿ ಪ್ರಾರಂಭಿಸಲಾಗುವುದು.
3. ಕೋವಿಡ್-19 ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ SOP ಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು.
4. ಶಾಲೆ/ಕಾಲೇಜು ಗಳಲ್ಲಿ **Sanitize** ಮಾಡಲು ನಗರಾಡಳಿತ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು ಅಗತ್ಯ ಪೂರ್ವಭಾವಿ ಕ್ರಮ ಕೈಗೊಳ್ಳಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ಬರುವ ಸರ್ಕಾರಿ ಶಾಲೆ/ಕಾಲೇಜು ಗಳಿಗೆ ಶಿಕ್ಷಣ ಇಲಾಖೆ ಸೂಚಿಸಿರುವಂತೆ ಹಾಗೂ ಕೋವಿಡ್-19 ಮಾರ್ಗಸೂಚಿಯಲ್ಲಿ ಉಲ್ಲೇಖಿಸಿರುವಂತೆ ಶಾಲೆ/ಕಾಲೇಜು ಗಳಲ್ಲಿ (Inside and outside of the School/College premises) **31.12.2020 ರ ಒಳಗೆ ಕಡ್ಡಾಯವಾಗಿ Sanitize ಮಾಡಲು** ಎಲ್ಲಾ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳು ಪೂರ್ವಭಾವಿ ಮುಂಜಾಗ್ರತಾ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವೈಯುಕ್ತಿಕ ಗಮನ ಹರಿಸಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದೆ.

ವಂದನೆಗಳೊಂದಿಗೆ,

(ಕ. ಟಿ. ಮಾನ್ಯ ಆಯುಕ್ತರಿಂದ ಅನುಮೋದಿಸಿದೆ.)

ತಮ್ಮ ವಿಶ್ವಾಸಿ
-ಸಹಿ-
ಉಪ ಕಾರ್ಯದರ್ಶಿ (ಆಡಳಿತ)
ಪಂ. ರಾಜ್ಯ ಆಯುಕ್ತಾಲಯ, ಬೆಂಗಳೂರು

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:
1. ರಾಜ್ಯದ ಎಲ್ಲಾ ತಾಲ್ಲೂಕು ಪಂಚಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ

ಪ್ರತಿಯನ್ನು ಮಾಹಿತಿಗಾಗಿ:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು. ಮಾನ್ಯರ ಗಮನಕ್ಕೆ ತರಲು ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾ.ಅ.&ಪಂ.ರಾಜ್ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು. ಮಾನ್ಯರ ಗಮನಕ್ಕೆ ತರಲು ಕೋರಿದೆ.
3. ಆಯುಕ್ತರು, ಪಂ.ರಾಜ್ ಆಯುಕ್ತಾಲಯ ಇವರ ಆಪ್ತ ಸಹಾಯಕರು.
4. ಕಛೇರಿ ಪ್ರತಿ.

ತಮ್ಮ ವಿಶ್ವಾಸಿ
21.12.2020
ಉಪ ಕಾರ್ಯದರ್ಶಿ (ಆಡಳಿತ)
ಪಂ. ರಾಜ್ಯ ಆಯುಕ್ತಾಲಯ, ಬೆಂಗಳೂರು